ಬೇಲೂರು ನಗರದ ಬಸ್ ನಿಲ್ದಾಣ

119 (569) ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) : ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಬೇಲೂರು ನಗರದಲ್ಲಿ ಕರ್ನಾರಸಾ ಸಂಸ್ಥೆಯ ಬಸ್ ನಿಲ್ದಾಣ ಎಷ್ಟು ಎಕರೆ ಪ್ರದೇಶದಲ್ಲಿದೆ;

ಆ) ಈ ಜಾಗವು ಬಸ್ ನಿಲ್ದಾಣಕ್ಕೆ ಕಡಿಮೆಯಾಗಿದ್ದು, ಪಕ್ಕದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ 240 x 28 ಅಡಿ ವಿಸ್ತೀರ್ಣದ ಜಾಗವನ್ನು ಕೇಳಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಸದರಿ ಜಾಗವನ್ನು ಲೋಕೋಪಯೋಗಿ ಇಲಾಖೆಯವರು ನೀಡದಿರಲು ಕಾರಣಗಳೇನು?

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು) :

ಅ) ಹಾಸನ ಜಿಲ್ಲೆಯ ಬೇಲೂರಿನಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ಬಸ್ ನಿಲ್ದಾಣವು 1 ಎಕರೆ 16 ಗುಂಟೆ ಪ್ರದೇಶದಲ್ಲಿರುತ್ತದೆ.

ಆ) ಹೌದು.

ಇ) ಕ.ರಾ.ರ.ಸಾ.ಸಂಸ್ಥೆಗೆ ಬಸ್ ನಿಲ್ದಾಣ ನಿರ್ಮಿಸಲು ಜಾಗ ನೀಡಿದಲ್ಲಿ ನಿರೀಕ್ಷಣಾ ಮಂದಿರ ಮತ್ತು ವಿಐಪಿ ಗೆಸ್ಟ್ ಹೌಸುಗಳಲ್ಲಿ ತಂಗುವ ಗಣ್ಯ, ಅತಿಗಣ್ಯ ಅತಿಥಿಗಳಿಗೆ ಮತ್ತು ಸರ್ಕಾರಿ ನೌಕರರ ವಸತಿಗೃಹ ಹಾಗೂ ಹತ್ತಿರದಲ್ಲೇ ಇರುವ ಲೋಕೋಪಯೋಗಿ ಇಲಾಖೆಯ ಕಛೇರಿ ಕಟ್ಟಡಗಳ ಜನರಿಗೆ ಶಬ್ದ ಮಾಲಿನ್ಯದಿಂದ ತೊಂದರೆಯಾಗುವ ಸಾಧ್ಯತೆ ಇದ್ದು, ಬೇಲೂರು ಪಟ್ಟಣವು ಐತಿಹಾಸಿಕ ಯಾತ್ರಸ್ಥಳವಾಗಿರುವುದರಿಂದ ಸರ್ಕಾರದ ಗಣ್ಯ ವ್ಯಕ್ತಿಗಳು ಹಾಗೂ ವಿಐಪಿಗಳು ಈ ಸ್ಥಳಕ್ಕೆ ಭೇಟಿ ನೀಡುವುದರಿಂದ ಪ್ರಸ್ತಾಪಿತ ಜಾಗವನ್ನು ಹಸ್ತಾಂತರಿಸಲು ಸೂಕ್ತವಲ್ಲವೆಂದು ಲೋಕೋಪ ಯೋಗಿ ಇಲಾಖೆಯು ತಿಳಿಸಿರುತ್ತದೆ. ಆದಾಗ್ಯೂ, ಪ್ರಸ್ತಾಪಿತ ಸ್ಥಳವನ್ನು ನೀಡುವಂತೆ ಕೋರಿ ಲೋಕೋಪಯೋಗಿ ಇಲಾಖೆಗೆ ಮತ್ತೊಮ್ಮೆ ಪತ್ರ ಬರೆಯಲಾಗಿದೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಬೇಲೂರು ನಗರದಲ್ಲಿ ಬಸ್ ಸ್ಟ್ಯಾಂಡ್ ಎಷ್ಟು ಎಕರೆಯಲ್ಲಿದೆ? ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು 1 ಎಕರೆ 16 ಗುಂಟೆನಲ್ಲಿ ಬೇಲೂರು ತಾಲ್ಲೂಕು headquartersನ bus stand ಇದೆ ಎನ್ನುವಂತಹ ಅಂಶವನ್ನು ಹೇಳಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಬಸ್ ನಿಲ್ದಾಣದ ಜಾಗ ಕಡಿಮೆ ಇರುವುದರಿಂದ, ಪಕ್ಕದಲ್ಲೇ ಲೋಕೋಪಯೋಗಿ ಇಲಾಖೆಯ 240 ಅಡಿ ಉದ್ದ, 28 ಅಡಿ ಅಗಲದ ಜಾಗವನ್ನು ಕೊಡಬೇಕೆಂದು ಕೇಳಿದ್ದೇವೆ. ಅದು ಖಾಲಿ ಜಾಗ, ಅಲ್ಲಿ ಏನೂ ಇಲ್ಲ. ಅಲ್ಲಿ ಜಾಗ ಇರುವುದು ನಿಜ ಎಂದು ಹೇಳಿದ್ದಾರೆ. ಲೋಕೋಪಯೋಗಿ ಇಲಾಖೆ ಸದರಿ ಜಾಗವನ್ನು ನೀಡದಿರಲು ಕಾರಣ ಗಳೇನು? ಎಂಬ ನನ್ನ ಪ್ರಶ್ನೆಗೆ ಮಾನ್ಯ ಸಚಿವರು, ಸದರಿ ಜಾಗ ನಿರೀಕ್ಷಣಾ ಮಂದಿರದ ಪಕ್ಕದಲ್ಲಿದೆ, ವಿ.ಐ.ಪಿ. ಗೆಸ್ಟ್ ಹೌಸ್‌ಗಳಲ್ಲಿ ತಂಗುವ ಗಣ್ಯ ಮತ್ತು ಅತಿ ಗಣ್ಯ ಮತ್ತು ಸರ್ಕಾರಿ ನೌಕರರ ವಸತಿಗೃಹ ಇವೆಲ್ಲಾ ಇರುವುದರಿಂದ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಈಗ ಪ್ರತಿ ವರ್ಷ ಬೇಲೂರು bus stand ನಲ್ಲಿ 3–4 accidents ಆಗಿ ಅಲ್ಲಿ ರೈತರು ಸಾಯುತ್ತಿದ್ದಾರೆ. ಅಲ್ಲಿ ಖಾಲಿ ಜಾಗ ಇರುವುದನ್ನು ನಾವು ಕೇಳುತ್ತಿದ್ದೇವೆ. ಅಲ್ಲಿ ಶಬ್ದ ಏನೂ ಆಗುವುದಿಲ್ಲ. ಅಲ್ಲಿ VIP Guest house ನಲ್ಲಿ ಶ್ರೀಮಂತರು ಮಾತ್ರವೇ ಉಳಿದುಕೊಳ್ಳುತ್ತಾರೆ. ಅದರ ಗೋಡೆ ಬೇಕಾದರೆ ಎತ್ತರವಾಗಿ ಕಟ್ಟೋಣ. ಅದರಲ್ಲೇನು ತೊಂದರೆಯಾಗುವುದಿಲ್ಲ. ಆಗ ಶಬ್ದ ಏನೂ ಬರುವುದಿಲ್ಲ. ಅಲ್ಲಿ ಬಡವರು ವರ್ಷಕ್ಕೆ 4–5 ಜನ ಸಾಯಬಹುದು, ಆದರೆ ಶ್ರೀಮಂತರು safe ಆಗಿ ಇರಲಿ ಎನ್ನುವುದು ಸರಿಯಲ್ಲ. ಅದು ಭಾರಿ ದೂರವಿರುವುದಿಂದ ತೊಂದರೆಯಾಗುವುದಿಲ್ಲ. ಮಾನ್ಯ ವಸತಿ ಸಚಿವರು ಮತ್ತು ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಸಹ ಅದನ್ನು ಸ್ಥಳಾಂತರ ಮಾಡಬೇಕು ಇಲ್ಲವೇ ವಿತರಿಸಬೇಕು ಎಂದು ಹೇಳಿದ್ದಾರೆ. ಎರಡರಲ್ಲಿ ಒಂದನ್ನು ಮಾಡಬೇಕು. ಮಾನ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇದರ ಬಗ್ಗೆ ಉತ್ತರಿಸಿ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಮಾನ್ಯ ಸಾರಿಗೆ ಸಚಿವರು ಉತ್ತರ ಹೇಳಲಿ. ನೀವೇಕೆ ಎದ್ದು ನಿಂತಿದ್ದೀರಿ?

ಶ್ರೀ ವಿ.ಸೋಮಣ್ಣ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಮಾನ್ಯ ಸದಸ್ಯರು ಹೇಳಿದನ್ನು ನಾನು ಬೆಂಬಲಿಸುತ್ತೇನೆ. ನಾನು ಅಲ್ಲಿಗೆ ಹೋದಾಗಲೆಲ್ಲಾ ಅಲ್ಲಿ ಸುಮಾರು 50 ಜನ ಅಲ್ಲಿಗೆ ಬಂದು ಧರಣಿ ಮಾಡುತ್ತಾರೆ. ಅಲ್ಲಿ bud stand IB ಪಕ್ಕದಲ್ಲಿದೆ. ಅಲ್ಲಿ IB ಜಾಗ ಸಾಕಷ್ಟು ದೊಡ್ಡದಾಗಿದೆ. ಮಾನ್ಯ ಲೋಕೋಪಯೋಗಿ ಸಚಿವರು, ನಾಳೆ ಅಥವಾ ನಾಡಿದ್ದರಲ್ಲಿ ವರದಿಯೊಂದನ್ನು ತರಿಸಿಕೊಂಡು, IB ಪಕ್ಕದಲ್ಲಿರತಕ್ಕಂಥ ಜಾಗ ಏನು ಖಾಲಿ ಬಿದ್ದಿದೆ, ಅದನ್ನು bus stand ಮಾಡಲು ಹಸ್ತಾಂತರಿಸಬೇಕು. ನಾನು ಜಿಲ್ಲೆಯ ಉಸ್ತುವಾರಿ ಸಚಿವನಾಗಿ, ಮಾನ್ಯ ಗೃಹ ಮತ್ತು ಸಾರಿಗೆ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. Bus stand ಮತ್ತು IB ಹಳೆಯ ದಾಗಿದೆ. ಹೊಸ IBಗೆ shift ಮಾಡಿಕೊಳ್ಳುತ್ತೇವೆ, ಏನೂ ತೊಂದರೆಯಿಲ್ಲ. ಆ ಜಾಗವನ್ನು ಪಡೆದುಕೊಂಡು ಅಲ್ಲಿ ಮಾದರಿ Bus Stand ವೊಂದನ್ನು ಮಾಡಬೇಕು. ಬೇಲೂರು ಒಂದು ಇತಿಹಾಸ ಪ್ರಸಿದ್ಧವಾದ ಸ್ಥಳವಾಗಿದೆ. ಮಾನ್ಯ ಸಚಿವರು ಇಲ್ಲಿ ಒಂದು ಒಳ್ಳೆಯ ಬಸ್ ಸ್ಟ್ಯಾಂಡ್ ಮಾಡಿಕೊಡಬೇಕು.

ಅಧ್ಯಕ್ಷರು : Bus stand ಬಗ್ಗೆ ತಾವು ಪ್ರಸ್ತಾಪಿಸಿರುವುದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ : PWD ಇಲಾಖೆಯ ಅಧಿಕಾರಿಗಳು ಅಲ್ಲಿ ವಿ.ಐ.ಪಿ. ಗೆಸ್ಟ್‌ಹೌಸ್ ಇದೆ, ಅಲ್ಲಿ ಶಬ್ದ ಬರುತ್ತದೆ ಎಂದು ಹೇಳುತ್ತಾರೆ. ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ, ಖಾಲಿ ಇರುವ ಜಾಗವನ್ನು ಒದಗಿಸಿ ಕೊಡಿ. ನಾನೇನೂ ಬಿಲ್ಡಿಂಗ್ ಕೇಳುತ್ತಿಲ್ಲ, ...

ಅಧ್ಯಕ್ಷರು : ಈಗಾಗಲೇ ಅದನ್ನು ಹೇಳಿದ್ದೀರಿ. ಮತ್ತೆ ಮತ್ತೆ ಅದನ್ನೇ repeat ಮಾಡಿದರೆ ಹೇಗೆ?

ಶ್ರೀ ವೈ.ಎನ್. ರುದ್ರೇಶ್ ಗೌಡ : ಅಲ್ಲಿ ಖಾಲಿ ಇರುವ 240 ಅಡಿ ಉದ್ದ ಮತ್ತು 28 ಅಡಿ ಅಗಲ ವಿಸ್ತೀರ್ಣದ ಜಾಗವನ್ನು ಹಸ್ತಾಂತರಿಸುವುದಕ್ಕೆ request ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ರುದ್ರೇಶ್‌ಗೌಡರವರೆ, ಈಗಾಗಲೇ ನಮ್ಮ ಸಾರಿಗೆ ಇಲಾಖೆಯಿಂದ 240 x 28 ಅಡಿ ವಿಸ್ತೀರ್ಣದ ಜಾಗವನ್ನು ಕೊಡಿ ಎಂದು ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಖಾಲಿ ಇರುವಂತಹ ಜಾಗವನ್ನೆಲ್ಲಾ ಹಸ್ತಾಂತರಿಸಿದಲ್ಲಿ, ಅದಕ್ಕೆ

ಸರ್ಕಾರದ ವತಿಯಿಂದ ಏನೊಂದು nominal ಹಣ ಕೊಡಬಹುದೋ, ಅದನ್ನೂ ಸಹ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಅವರು ಪೂರ್ತಿ ಜಾಗವನ್ನು ಕೊಟ್ಟರೆ, ಒಳ್ಳೆಯ ಬಸ್ ನಿಲ್ದಾಣವನ್ನು ಕಟ್ಟುವುದಕ್ಕೆ ನಮಗೇನೂ ಹಣದ ಕೊರತೆ ಇಲ್ಲ. ನಾವು ಕೊಡುವುದಕ್ಕೆ ರೆಡಿ ಇದ್ದೇನೆ. ಜಾಗವನ್ನು ಹಸ್ತಾಂತರಿಸಲು ಈಗಾಗಲೇ 2–3 ಸಾರಿ ಪತ್ರ ವ್ಯವಹಾರವಾಗಿದೆ. ಜಾಗವನ್ನು ಮಾರ್ಕ್ ಮಾಡಿ, ಪ್ಲಾನ್ ಎಲ್ಲಾ ಮಾಡಲಾಗಿದೆ. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ. ಜಾಗ ಶೀಘ್ರ ಹಸ್ತಾಂತರವಾದ ತಕ್ಷಣ ನಾನು ಬಸ್ ನಿಲ್ದಾಣ ಕಟ್ಟಿಸಿಕೊಡುತ್ತೇವೆ. ಮಾನ್ಯ ರುದ್ರೇಶ್ ಗೌಡರವರೆ, ಮೊನ್ನೆ ತಾನೇ ತಮಗೆ ಡಿಪೋವೊಂದನ್ನು ಮಂಜೂರು ಮಾಡಿದ್ದೇವೆ. ಇದು ತಮ್ಮ ಎರಡನೆಯ ಬೇಡಿಕೆಯಾಗಿದೆ. ಇದನ್ನೂ ಈಡೇರಿಸಲು ನಾವು ರೆಡಿಯಾಗಿದ್ದೇವೆ. ನಿಮ್ಮ ಕ್ಷೇತ್ರಕ್ಕೆ ಒಳ್ಳೆಯದಾಗಲಿ, ಅಲ್ಲಿಯ ಜನರಿಗೆ ಒಳ್ಳೆಯದಾಗಲಿ ಎಂಬ ದೃಷ್ಟಿಯಿಂದ ಇದನ್ನೂ ಮಾಡುವುದಕ್ಕೆ ನಾವು ತಯಾರಿದ್ದೇವೆ. ಅವರೊಂದಿಗೆ ಪತ್ರ ವ್ಯವಹಾರ ಮಾಡಿ, ಆದಷ್ಟು ಶೀಘ್ರವಾಗಿ ಇದನ್ನು ಮಾಡಿಕೊಡುತ್ತೇವೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಆಯಿತು, ದಯಮಾಡಿ ಇದನ್ನು ಮಾಡಿ.

ಭಾಗ್ಯಲಕ್ಷ್ಮಿ ಫಲಾನುಭವಿಗಳು

120 (707) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ 2008–09 ರಿಂದ ಈ ತನಕ ಎಷ್ಟು ಜನ ಭಾಗ್ಯಲಕ್ಷ್ಮಿ ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗಿದೆ. (ವರ್ಷವಾರು ಮಾಹಿತಿ ನೀಡುವುದು);

ಆ) ಭಾಗ್ಯಲಕ್ಷ್ಮಿ ಬಾಂಡ್ ವಿತರಣೆಗೆ ಬಾಕಿ ಇರುವ ಫಲಾನುಭವಿಗಳು ಎಷ್ಟು (ವರ್ಷವಾರು ಮಾಹಿತಿ ನೀಡುವುದು);

ಇ) ಭಾಗ್ಯಲಕ್ಷ್ಮಿ ಬಾಂಡ್ ವಿತರಣೆಗೆ ಬಾಕಿ ಉಳಿಸಿಕೊಳ್ಳಲು ಕಾರಣವೇನು; ಎಷ್ಟು ದಿವಸಗಳೊಳಗೆ ಬಾಕಿ ಉಳಿದ ಭಾಗ್ಯಲಕ್ಷ್ಮಿ ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗುವುದು?